ದಿನಾಂಕಃ 20-07-2017 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು. - ಪಾಟೀ ಸವಾಲುಃ ಶ್ರೀ ಎಸ್ ಎಂ ಎನ್ ವಕೀಲರಿಂದ, 1 ಮತ್ತು 2ನೇ ಪ್ರತಿವಾದಿ ಪರವಾಗಿ ಃ

1. ನಾನು 1 ಮತ್ತು 2ನೇ ಪ್ರತಿವಾದಿ ಏನು ತಕರಾರು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಎ ಶೆಡ್ಯೂಲ್ ಮತ್ತು ಬಿ ಶೆಡ್ಯೂಲ್ ಆಸ್ತಿ ಬಗ್ಗೆ ಮಾಹಿತಿ ಇದೆ. ಸುಮಾರು 10 ವರ್ಷದಿಂದ ನಾವೆಲ್ಲ ಬೇರೆಬೇರೆ ಮನೆಗಳಲ್ಲಿ ವಾಸವಿದ್ದೇವೆ. 15-20 ವರ್ಷಗಳಿಂದ ಬೇರೆ ಬೇರೆ ವಾಸವಿದ್ದೇವೆ ಎಂದರೆ ಸರಿಯಲ್ಲ. ಎ ಶೆಡ್ಯೂಲಿನ ದಾವಾ ಆಸ್ತಿ ಸಂಖ್ಯೆಃ 28 ರಿಂದ 30 ಜಮೀನುಗಳು ಯಾರ ಹೆಸರಿನಲ್ಲಿವೆ ಎಂದರೆ ಸಾಕ್ಷೀ ಸುಮ್ಮನಿರುತ್ತಾರೆ. ಸದರಿ ಜಮೀನುಗಳನ್ನು 1ನೇ ಪ್ರತಿವಾದಿ ಯಾವಾಗ ಖರೀದಿ ಮಾಡಿದ್ದರು ಹೇಳಲು ಆಗುವುದಿಲ್ಲ. ಬಿ ಶೆಡ್ಯೂಲ್ ಆಸ್ತಿ ಸಂಖ್ಯೆಃ 5 ಮತ್ತು 6ನೇ ನಿವೇಶನಗಳು 1ನೇ ಪ್ರವಾದಿಯ ಹೆಸರಿನಲ್ಲಿವೆ. ಅವುಗಳನ್ನು 1ನೇ ಪ್ರತಿವಾದಿ ಯಾವ ವರ್ಷ ಖರೀದಿ ಮಾಡಿದ್ದರು ಅಂತಾ ಹೇಳಲು ಬರುವುದಿಲ್ಲ. ಮೇಲಿನ 3 ಜಮೀನುಗಳು ಮತ್ತು 2 ನಿವೇಶನಗಳನ್ನು 1ನೇ ಪ್ರತಿವಾದಿ ತನ್ನ ಸ್ವಯಾರ್ಜಿತ ಹಣದಿಂದ ಖರೀದಿ ಮಾಡಿ ಅದರ ಸ್ವಾಧೀನ ಅನುಭವದಲ್ಲಿದ್ದಾರೆ ಎಂದರೆ ಸುಳ್ಳು. ಮೇಲಿನ ಆಸ್ತಿಗಳನ್ನು 1ನೇ ಪ್ರತಿವಾದಿ ನಾವು ಬೇರೆ ಬೇರೆ ವಾಸಮಾಡಲು ಆರಂಭಿಸಿದ ಮೇಲೆ ಖರೀದಿಸಿದ್ದಾರೆ ಎಂದರೆ ಸುಳ್ಳು.

2. ನಾನು 5ನೇ ತರಗತಿವರೆಗೆ ಓದಿದ್ದೇನೆ, ನಾನು ವ್ಯಾಪಾರ ಮಾಡುತ್ತೇನೆ. ಮೇಲಿನ 5 ಆಸ್ತಿಗಳನ್ನು 1ನೇ ಪ್ರತಿವಾದಿ ಸ್ವಯಾರ್ಜಿತವಾಗಿ ದುಡಿದು ಸಂಪಾದಿಸಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನಮ್ಮ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಅಂತಾ ತೋರಿಸಲು ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಆಸ್ತಿಗಳಲ್ಲಿ ಮಾತ್ರ ನನಗೆ ಮತ್ತು ಪ್ರತಿವಾದಿ 1 ಮತ್ತು 2 ಇವರಿಗೆ

ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಅಲ್ಲಗಳಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು : ಶ್ರೀ ಆರ್ ಆರ್ ವಕೀಲರು ಸಮಯ ಕೋರಿರುತ್ತಾರೆ, ಅವರ ಪರವಾಗಿ ಪಾಟೀಸವಾ-ಲು ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.